ಸಾಮಾನ್ಯವಲ್ಲದ ವೇಳೆಯಲ್ಲಿ ಅನಿರೀಕ್ಷಿತ ಭೇಟಿ ಕೊಡುತ್ತಿದ್ದಾರೆ. ಪೋಲೀಸ್ ಗಸ್ತು ಮತ್ತು ಪಹರೆಯನ್ನು ಸೂಕ್ಷ್ಮ ಪ್ರದೇಶಗಳಲ್ಲಿ ಚುರುಕುಗೊಳಿಸಲಾಗಿದೆ.

ಅನುಮಾನಾಸ್ಪದವಾಗಿ ತಿರುಗುವ ಮತ್ತು ಸಮಾಜ ಘಾತುಕ ವ್ಯಕ್ತಿಗಳನ್ನು ಮುಂಜಾಗರೂಕತೆ ಮತ್ತು ಅಪರಾಧ ನಿರೋಧಕ ಕಾನೂನಿನ ಅನ್ವಯ ಬಂಧಿಸುವ ವ್ಯವಸ್ಥೆ ಮಾಡಲಾಗಿದೆ. ಗಡಿ ಪ್ರದೇಶಗಳಲ್ಲಿ ಅಪರಾಧಕ್ಕೆ ಸಂಬಂಧಿಸಿದಂತೆ ಗುಪ್ತ ವಾರ್ತೆ ಸುಳಿವು ಮತ್ತು ಮಾಹಿತಿಗಳನ್ನು ವಿನಿಮಯ ಮಾಡಿಕೊಳ್ಳಲು ಪೋಲೀಸ್ ಅಧಿಕಾರಿಗಳ ಸಭೆಗಳನ್ನು ಆಗಾಗ ನಡೆಸಲಾಗಿದೆ. ಅಪರಾಧಿಗಳನ್ನು ಪತ್ತೆ ಮಾಡಲು ಅಗತ್ಯವಾದ ಎಲ್ಲಾ ಕಟ್ಟುನಿಟ್ಟಿನ ಪ್ರಯತ್ನಗಳನ್ನು ಕೈಗೊಂಡಿದ್ದು, ಅಪರಾಧಗಳನ್ನು ತಡೆಯಲೂ ಹಾಗೂ ಅದ ಅಪರಾಧಗಳ ತುರ್ತು ತನಿಖೆ ಮತ್ತು ಪತ್ತೆ ಕಾರ್ಯಕ್ರಮ ಕೈಗೊಂಡಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಮನೆ ನಿವೇಶನ

2212 - ಶ್ರೀ ಸಾದತ್ ಅಖಾನ್ (ಚನ್ನಪಟ್ಟಣ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರನ್ನು ಹೊರತುಪಡಿಸಿ ಕಾರ್ಖಾನೆ ಮತ್ತು ವಸತಿ ಸೌಕರ್ಯ ಒದಗಿಸಲು ಏನಾದರೂ ಯೋಜನೆ ಇದೆಯೇ?

ಆ) ನಗರಗಳಲ್ಲಿ ಮತ್ತು ಹಳ್ಳಿಗಳಲ್ಲಿ ವಸತಿರಹಿತ ವ್ಯಕ್ತಿಗಳನ್ನು ಗುರುತಿಸಲು ಪ್ರತ್ಯೇಕವಾದ ಯೋಜನೆಯನ್ನು ರೂಪಿಸಲಾಗಿದೆಯೇ?

ಇ) ಹಾಗಿದ್ದಲ್ಲಿ, ಆದವರ ವಿವರಗಳನ್ನು ಒದಗಿಸುವುದು.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಕೇಂದ್ರ ಸರ್ಕಾರದಿಂದ ಸಹಾಯಧನ ಹಾಗೂ ಹುಡ್ಕೋದಿಂದ ಸಾಲದ ನೆರವು ಹೊಂದಿದಂತೆ ಬೀಡಿ ಕಾರ್ಮಿಕರಿಗಾಗಿ, ನೇಕಾರರಿಗೆ, ಬೆಸ್ತರಿಗೆ, ರೇಷ್ಮೆ ಕಾರ್ಮಿಕರಿಗೆ ಮತ್ತು ಒಂಟಿ ಉದ್ಯೋಗಸ್ಥ ಮಹಿಳೆಯರಿಗೆ ಕಾರ್ಖಾನೆ ಮತ್ತು ವಸತಿ ಸೌಕರ್ಯ ಒದಗಿಸುವ ಯೋಜನೆ ಇದ್ದು, ಪ್ರಸಕ್ತ ವರ್ಷದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಬೀಡಿ ಕಾರ್ಮಿಕರು

1. ಗುಂಡ್ಲುಪೇಟೆ: 150 ಎಲ್‌ಐಜಿ-1 ಮನೆಗಳು
2. ಕ್ಯಾತಮಾರನಹಳ್ಳಿ : 1000 ಎಲ್‌ಐಜಿ -1 ಮನೆಗಳು ಮೈಸೂರು.
3. ಗರ್ಗೇಶ್ವರಿ : 150 ಎಲ್‌ಐಜಿ-1 ಮನೆಗಳು.
4. ನಿಪ್ಪಾಣಿ ಬೆಳಗಾಂ : 302 ಎಲ್‌ಐಜಿ-1 ಮನೆಗಳು.
5. ದಾವಣಗೆರೆ : 302 ಎಲ್‌ಐಜಿ-1 ಮನೆಗಳು.

ಒಂಟಿ ಉದ್ಯೋಗಸ್ಥ ಮಹಿಳೆಯರಿಗೆ

1. ಯಲಹಂಕ ಬೆಂಗಳೂರು : 104 ಮನೆಗಳು

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯದ ಐ.ಎ.ಎಸ್ ಅಧಿಕಾರಿಗಳು

2154 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಿನಾಂಕ 1-4-1989ರಲ್ಲಿದ್ದಂತೆ ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಐ.ಎ.ಎಸ್. ಅಧಿಕಾರಿಗಳ ಒಟ್ಟು ಸಂಖ್ಯೆ?*

ಆ) *ಸೇವೆ ಸೇರಿದ ನಂತರ ಬೆಂಗಳೂರು ನಗರ ಗ್ರಾಮಾಂತರದಲ್ಲಿ ಕೃಷಿ ಭೂಮಿಯನ್ನು ಹೊಂದಿರುವ ಅಧಿಕಾರಿಗಳ ಸಂಖ್ಯೆ*

ಇ) *ಭೂ ಪರಿಮಿತಿ ಕಾಯಿದೆಯ ನಿಯಮಗಳನ್ನು ಈ ಅಧಿಕಾರಿಗಳಲ್ಲಿ ಯಾರಾದರೂ ಉಲ್ಲಂಘಿಸಿದ್ದಾರೆಯೇ?*

ಈ) *ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮ.*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) 241

ಆ) ಒಂದು

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಕರ್ನಾಟಕ ಗೃಹ ಮಂಡಲಿಯು ಬೆಂಗಳೂರು ನಗರದಲ್ಲಿ ಹಂಚಿರುವ ಮನೆಗಳು.

2114 - ಶ್ರೀ ಪೆರಿಕಲ್ ಎಂ ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990ರ ಆಕ್ಟೋಬರ್‌ನಿಂದ 1991ರ ಜುಲೈ ಅಂತ್ಯದವರೆಗೆ ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ನಗರದಲ್ಲಿ ಹಂಚಿರುವ ಬಿಡಿ ಮನೆಗಳ ಸಂಖ್ಯೆ.*

ಆ) *ಹಂಚಿಕೆದಾರರ ಹೆಸರು ಮತ್ತು ವಿಳಾಸ.*

ಇ) *ಕೆಲವು ಹಂಚಿಕೆದಾರರು ಮನೆ : ನಿವೇಶನಗಳನ್ನು ಹೊಂದಿದುವುದೇನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ, ಅಂತಹವರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ.?*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) 198 ಮನೆಗಳು.

ಆ) ಅನುಬಂಧ 'ಅ'ನಲ್ಲಿ ಲಗತ್ತಿಸಲಾಗಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.